ತದನಂತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮನುಗನಹಳ್ಳಿ ಗ್ರಾಮ ಪಂಚಾಯಿತಿ, ಹುಣಸೂರು ತಾಲ್ಲೂಕು ಇವರು ಉಲ್ಲೇಖ (5) ರಲ್ಲಿ ಸದರಿ ಭೂ-ಪರಿವರ್ತಿತ ಜಮೀನನ್ನು ಮೇಲ್ಕಂಡ ಮಾಲೀಕರಿಂದ ಶ್ರೀ ರಂಗನಾಥ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಪರವಾಗಿ ಮಾಲೀಕರಾದ ಮುರುಳಿಧರ್ ಪುಟ್ಟಸ್ವಾಮಿ ಬಿನ್ ಜಿ.ಆರ್. ಪುಟ್ಟಸ್ವಾಮಿ ಮತ್ತು ಶ್ರೀ ಅಚ್ಚುತ್ತಮೂರ್ತಿ ಕೆ. ಬಿನ್ ಜಿ.ಆರ್. ಕೃಷ್ಣಮೂರ್ತಿ ಇವರು ಶುದ್ಧಕ್ರಯಕ್ಕೆ ಪಡೆದಿರುವುದರಿಂದ ಸದರಿಯವರ ಹೆಸರಿಗೆ ಪರಿಷ್ಕೃತ ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲು ಕೋರಿರುತ್ತಾರೆ.

ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಮೈಸೂರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಜಮೀನಿನ ಮೇಲ್ಮೈ ಲಕ್ಷಣ ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿನ ಬೆಳವಣಿಗೆಗಳಿಗೆ ಅನುಗುಣವಾಗಿ ಹಾಗೂ ಉಲ್ಲೇಖ (6) ಮತ್ತು (7) ರನ್ವಯ ವಿನ್ಯಾಸ ನಕ್ಷೆಯನ್ನು ಈ ಕಛೇರಿಯಲ್ಲಿ ಸಿದ್ಧಪಡಿಸಲಾಗಿದೆ.

**ಪ್ರಸ್ತಾವಿತ ಜಮೀನಿನ ವಸತಿ ವಿನ್ಯಾಸ ನಕ್ಷೆಯಲ್ಲಿ ವಸತಿಗಾಗಿ 6276.76 ಚ.ಮೀ., (ಶೇ.52.57), ಉದ್ಯಾನವನ/ಬಫರ್ ಮತ್ತು ಆಟದ ಮೈದಾನಕ್ಕಾಗಿ 814.50 ಚ.ಮೀ. (ಶೇ.06.82), ಸಾರ್ವಜನಿಕ/ಅರೆಸಾರ್ವಜನಿಕ ಉದ್ದೇಶಕ್ಕಾಗಿ 578.70 ಚ.ಮೀ. (ಶೇ.04.85), ಸಾರ್ವಜನಿಕ ಉಪಯುಕ್ತತೆಗಾಗಿ (Septic Tank & ನೀರು ಸರಬರಾಜು ಘಟಕ) 135.81 ಚ.ಮೀ. (ಶೇ.01.14) ಮತ್ತು ರಸ್ತೆ/ರಸ್ತೆ ವಿಸ್ತರಣೆಗಾಗಿ 4133.81 ಚ.ಮೀ. (ಶೇ.34.62) ವಿಸ್ತೀರ್ಣದ ಪ್ರದೇಶವನ್ನು ನಿಗದಿಪಡಿಸಲಾಗಿದೆ.**

**ವಸತಿ ಉಪಯೋಗಕ್ಕೆ ಕಾಯ್ದಿರಿಸಿದ ಪ್ರದೇಶದಲ್ಲಿ 9.14ಮೀ X 12.20ಮೀ ಅಳತೆಯ 10 ನಿವೇಶನಗಳು, 6.10ಮೀ X 9.14ಮೀ ಅಳತೆಯ 16 ನಿವೇಶನಗಳು, 9.14ಮೀ X ಅನಿಯತ ಅಳತೆಯ 16 ನಿವೇಶನಗಳು ಮತ್ತು 16 ಅನಿಯತ ನಿವೇಶನಗಳು ಸೇರಿ ಒಟ್ಟು 58 ನಿವೇಶನಗಳನ್ನು ಅಳವಡಿಸಲಾಗಿದೆ.**

ಸದರಿ ವಿನ್ಯಾಸವನ್ನು ಕಾರ್ಯಗತಗೊಳಿಸುವ ಸಂಬಂಧ ಗ್ರಾಮ ಪಂಚಾಯಿತಿಯು ಉಲ್ಲೇಖ (6) ರ ಮಾರ್ಗಸೂಚಿಗಳನ್ನು ಹಾಗೂ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಅನುಸರಿಸುವ ನಿಬಂಧನೆಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ವಿನ್ಯಾಸ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಲಾಗಿದೆ.

1. ವಿನ್ಯಾಸವು ಅನುಮೋದನೆ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸದ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಳ್ಳದಿದ್ದಲ್ಲಿ ವಿನ್ಯಾಸದ ಅನುಮತಿಯನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ನವೀಕರಿಸಿಕೊಳ್ಳತಕ್ಕದ್ದು.
2. **ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ಮೈಸೂರು ಇವರ ಪತ್ರ ಸಂ: ನಗ್ರಾಯೋಸನಿಮೈ/ನ.ಯೋ(2)/ವಿ.ನ.ಅ/552/2020-21 ದಿ: 08-09-2020 ಮತ್ತು ವಿನ್ಯಾಸ ನಕ್ಷೆಯ ಸಂ: ನಗ್ರಾಯೋಸನಿಮೈ/ಹುಣಸೂರು ತಾಲ್ಲೂಕು/ಅಂಕನಹಳ್ಳಿ ಗ್ರಾಮ/ವಿನ್ಯಾಸ/552/2020-2021 ದಿ: 08-09-2020 ರಲ್ಲಿ ಅನುಮೋದಿಸಲಾದ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿದೆ.**
3. ಅಭಿವೃದ್ಧಿ ಶುಲ್ಕಗಳನ್ನು ಪ್ರಸಕ್ತ ಸಾಲಿನ ಲೋಕೋಪಯೋಗಿ ಇಲಾಖೆಯ ದರಗಳನ್ವಯ ಸಕ್ಷಮ ಇಲಾಖೆಯಿಂದ ಪಡೆದ ಅಂದಾಜುಪಟ್ಟಿ ಹಾಗೂ ಇತರೆ ಶುಲ್ಕಗಳನ್ನು ಕಾನೂನು ಪ್ರಕಾರ ಹಾಗೂ ಸರ್ಕಾರಿ ಆದೇಶಗಳನ್ವಯ ಪಡೆಯತಕ್ಕದ್ದು. ವಿನ್ಯಾಸ ಕಾರ್ಯಗತಗೊಳಿಸುವ ಮೊದಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯಿಂದ ಅಗತ್ಯ ಅನುಮತಿ ಪಡೆಯಬೇಕು.
4. **ಪ್ರಸ್ತಾವಿತ ಜಮೀನಿನ ಸರ್ವೆ ನಕ್ಷೆಯಂತೆ 150.30 ಚ.ಮೀ ವಿಸ್ತೀರ್ಣವು ಕಡಿಮೆಯಿದ್ದು, ಸದರಿ ಸರ್ವೆ ನಕ್ಷೆಯಂತೆ (ಅಳತೆಗೆ ಅನುಗುಣವಾಗಿ) ವಿನ್ಯಾಸ ನಕ್ಷೆಯನ್ನು ತಯಾರಿಸಲಾಗಿದೆ.**
5. ಅನುಮೋದಿತ ನಕ್ಷೆಯಂತೆಯೇ ವಿನ್ಯಾಸವನ್ನು ಅಭಿವೃದ್ಧಿಪಡಿಸಬೇಕು. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಪೂರ್ವಾನುಮತಿಯಿಲ್ಲದೇ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
6. ಈ ವಿನ್ಯಾಸದಲ್ಲಿನ ರಸ್ತೆ/ರಸ್ತೆ ವಿಸ್ತರಣೆ, ಉದ್ಯಾನವನ/ಬಫರ್ ಮತ್ತು ಆಟದ ಮೈದಾನ, ಸಾರ್ವಜನಿಕ/ಅರೆಸಾರ್ವಜನಿಕ ಉಪಯೋಗಕ್ಕಾಗಿ, ಸಾರ್ವಜನಿಕ ಉಪಯುಕ್ತತೆಗಾಗಿ ಕಾಯ್ದಿರಿಸಿರುವ ಪ್ರದೇಶಗಳನ್ನು ಅರ್ಜಿದಾರರಿಂದ/ಅಭಿವೃದ್ಧಿದಾರರಿಂದ ಯಾವುದೇ ಪರಿಹಾರವನ್ನು ನೀಡದೆ ಸ್ಥಳೀಯ ಸಂಸ್ಥೆಯು ಮುಕ್ತಟ್ಟೆಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮೂಲಕ ಪಡೆಯತಕ್ಕದ್ದು.

3...